Mr. DEPUTY SPEAKER.—You have sent it today all 11-00a.m. It has to be attended to. It cannot be admitted under rule 312. It can be treated as a call attention. Anyway it will be attended to.

Sri B. V. KAKKILAYA.—It is is a serious matter. It must be done today.

ಶ್ರೀ ಕಾಗೋಡು ತಿಮ್ಮಪ್ಪ.—ಇದು ಬಹಳ ಪ್ರಾಮುಖ್ಯವಾದ ವಿಷಯ. ಈ ಬಗ್ಗೆ ಈವಾಗಲೇ ಹೇಳಿಕೆ ಕೊಡುವುದಕ್ಕೆ ಸಿದ್ಧಪಡಿಸಿಕೊಂಡು ಬರಬೇಕಾಗಿತ್ತು. ಈ ಪರಿಸ್ಥಿತಿ ಮುಂದುವರೆಯುವುದಾದರೆ ಪ್ರಕ್ಷಬ್ಧ ಪರಿಸ್ಥಿತಿ ಉಂಟಾಗುತ್ತದೆ, ಆದುದರಿಂದ ತಾವು ತಕ್ಷಣ ಹೇಳಿಕೆ ಕೊಡುವುದಕ್ಕೆ ಮುಂದಾಗಬೇಕು.

ಶ್ರೀ ಎಚ್. ಡಿ. ದೇವೇಗೌಡ.—ರೂಲ್ 312 ರ ಪ್ರಕಾರ ಅವರು ನೋಟೀಸನ್ನು ಕಳುಹಿಸಿದ್ದಾರೆ. ಅದನ್ನು ಕಾಲ್ ಅಟೆನ್‌ಷನ್ ಆಗಿ ಪರಿವರ್ತನೆ ಮಾಡಿದ್ದೇನೆ ಎಂದು ಹೇಳಿದಿರಿ, ಅದಕ್ಕೆ ಉತ್ತರ ಬರಬೇಕಾದರೆ ರೂಟೀನ್ ಕೋರ್ಸ್‌ನಲ್ಲಿ ಬರುತ್ತದೆ. ಇದಕ್ಕೆ ಮುಂಜಾಗ್ರತೆ ಕ್ರಮ ತೆಗೆದುಕೊಂಡಿದ್ದರೆ ಈ ಪರಿಸ್ಥಿತಿ ಉಂಟಾಗುತ್ತಿರಲಿಲ್ಲ. ಆದುದರಿಂದ ಇದರ ಹಿನ್ನೆಲೆ ಏನು ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅದನ್ನು ನೋಡಬೇಕು. ಇದಕ್ಕೆ ಪೋಲೀಸ್‌ನವರು ಶಾಮೀಲ್ ಆಗಿದ್ದಾರೆ ಎಂದು ಹೇಳುತ್ತಾರೆ. ಈಪೊತ್ತು ನಕರ್ಾರದ ಯಂತ್ರ ಕೆಲಸ ಮಾಡತಕ್ಕಂಥ ಕಾಲದಲ್ಲಿ ನಿಮ್ಮ ಹೋಮ್ ಸೆಕ್ರೆಟರಿಯವರು ಆಲ್ಲಿಯ ಎಸ್. ಪಿ. ಅವರನ್ನು ಕಾಂಟ್ಯಾಕ್ಟ್ ಮಾಡಿ ವಿಷಯ ತಿಳಿದುಕೊಂಡು ಈ ಸಭೆಗೆ ಉತ್ತರ ಕೊಡುವುದು ಕಷ್ಟವಾಗುತ್ತದೆಯೆ ? ರೂಲ್ 312ರ ಪ್ರಕಾರ ನೋಟೀಸ್ ಕೊಟ್ಟಿದ್ದರೆ ಆದನ್ನು ನೀವು ಏತಕ್ಕೆ ಕಾಲ್ ಅಟೆನ್‌ಷನ್ ಮಾಡಿದಿರಿ. ಈ ರೀತಿ ಮಾಡಿದರೆ ಆದಕ್ಕೆ ಉತ್ತರ ಬರುವುದು 15—20 ದಿವಸ ಆಗುತ್ತದೆ. ಆದುದರಿಂದ ರೂಲ್ 312 ಇರುವುದು ಏತಕ್ಕೆ ?

Mr. DEPUTY SPEAKER.—I will read out rule 312:

> "A member who wishes to bring to the notice of the Assembly any matter which is not a point of order shall give notice to the Secretary in writing stating briefly the point which he wishes to raise in the Assembly together whith reasons for wishing to raise it and he shall be permitted to raise it only after the Speaker has given his consent and at such time and date as the Speaker may fix."

He has given today. If it is said that it should be taken up today, it is something which is impossible. It will be fixed as soon as imformation is collected. If I had the authority to get the information I would have done is in a couple of minutes.

## Beating of a Harijan women at Sorab

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).–ಅಧ್ಯಕ್ಷರೇ, ಸೊರಬ ತಾಲ್ಲೂಕಿನಲ್ಲಿ ಒಬ್ಬ ಹರಿಜನ ಮಹಿಳೆಯನ್ನು ಹಿಡಿದುಕೊಂಡು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಈ ವಿಷಯ ನಿನ್ನೆಯೇ ಪ್ರಸ್ತಾಪ ಮಾಡಿದ್ದೇನೆ. ಇದುವರೆಗೂ ಪೋಲೀಸ್ ಅಧಿಕಾರಿಗಳು ಆ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿಲ್ಲ. ಆದರ ಬಗ್ಗೆ ನಾನು ಮೊನ್ನೆ ದಿವಸವೇ ನೋಟೀಸ್ ಕೊಟ್ಟಿದ್ದೇನೆ.

Mr. DEPUTY SPEAKER.–There are so many call attention notices received and they have been sent to the Government. I will include them as and when replies are received.

ಶ್ರೀ ಕಾಗೋಡು ತಿಮ್ಮಪ್ಪ.—ನಾಳೆಯಾದರೂ ತೆಗೆದುಕೊಳ್ಳುವ ಹಾಗೆ ಮಾಡಬೇಕು, ಗಂಡ ಹೆಂಡತಿ ಊರಿಗೆ ಹೋಗದೆ ಇರುವ ಪರಿಸ್ಥಿತಿಯುಂಟಾಗಿದೆ. ಪೋಲೀಸಿನವರು ರಕ್ಷಣೆ ಕೊಡುತ್ತಿಲ್ಲ.

## Issue of Passes to the Public Gallery

ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸದನವ ಎಲ್ಲ ಸದಸ್ಯರಿಗೂ ಸಂಬಂಧ ಪಟ್ಟಂಥ ತಮಗೂ ಸಂಬಂಧಪಟ್ಟಂಥ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ರಾಜ್ಯಾಂಗದ ಆರ್ಟಿಕಲ್ 15 (2) (ಬಿ) ಪ್ರಕಾರ ಸಾರ್ವಜನಿಕರ ಪ್ರವೇಶಕ್ಕೆ ಒಳಗಾಗಿರತಕ್ಕ ಪ್ರದೇಶಗಳಿಗೆ ಹೋಗುವುದಕ್ಕೆ ಎಲ್ಲರಿಗೂ ಹಕ್ಕು ಇದೆ. ನಮ್ಮ ಸದನದಲ್ಲಿ ಈ ಹೊತ್ತು ನಮ್ಮ ಕಡೆಯಿಂದ ಬರತಕ್ಕವರಿಗೆ ಪ್ರವೇಶಕ್ಕೆ ಆಪ್ಪಣೆ ಚೀಟಿ ಕೊಡಬೇಕೆಂದು ಬರೆದು ಕಳುಹಿಸಿದರೆ ಅವರನ್ನು ವಾಪಸು ಕಳುಹಿಸಿಬಿಡ್ತಾರೆ. ಯಾರು ನಮ್ಮುನ್ನು ಆರಿಸಿ ಇಲ್ಲಗೆ ಕಳುಹಿಸಿದ್ದಾರೆಯೋ ಅವರನ್ನು ಪ್ರೇಕ್ಷಕರ ಗ್ಯಾಲರಿಗೆ ಬಿಡುವುದಕ್ಕೆ ಅವಕಾಶವಿಲ್ಲವೆಂದರೆ ಇದು ಪ್ರಜಾಪ್ರಭುತ್ವದ ವಿಪರ್ಯಾಸ ಎನ್ನದೆ ವಿಧಿ ಇಲ. ಈಗಿನ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ಮೊದಲು ಪ್ರತಿ ಸದಸ್ಯರಿಗೂ ಎರಡು ಪಾಸು ಕೊಡುತ್ತಿದ್ದರು. ಈಗ ಅದೂ ಇಲ್ಲ. ನಾವು ಬರೆದು ಕಳುಹಿಸಿದರೆ ಪ್ರವೇಶ ಕೂಡ ಕೊಡುತ್ತಿಲ್ಲ.

ಉಪಾಧ್ಯಕ್ಷರು.—ಇಂಥ ಪ್ರಶ್ನೆ ಕೆಲವು ದಿವಸಗಳ ಹಿಂದೆ ಬಂದಾಗ ನಾನು ವಿಚಾರಿಸಿದೆ. ಸ್ವಲ್ಪ ನಿಧಾನಿಸಿರಿ ಎಂದು ಹೇಳಿದರಂತೆ. ಆಲ್ಲಿ ಕ್ಯೂ ಬಹಳ ದೊಡ್ಡದಾಗಿತ್ತು. ಆದ್ದರಿಂದ ಸ್ವಲ್ಪ ಕಾಲ, ನಿಧಾನ ಮಾಡಲು ಹೇಳಿದರೆ ಪಾಸುಗಳನ್ನೂ ಕೊಡಿ ನಾವೇ ತುಂಬಿಕೊಳ್ಳುತ್ತೇವೆಂದು ಕೇಳಿದರಂತೆ. ಪಾಸುಗಳನ್ನು ನಾವೇ ತುಂಬಿ ಕೊಡುತ್ತೇವೆ, ಸ್ವಲ್ಪ ನಿಧಾನ ಮಾಡಿ ಎಂದು ಹೇಳಿದ್ದಕ್ಕೆ ಆಷ್ಟರಲ್ಲಿ ಬಂದು ಪಾಸು ಕೊಡಲಿಲ್ಲವೆಂದು ಹೇಳಿವ್ವಾರೆ. ಪಾಸುಗಳನ್ನು ಕೊಡುವ ವಿಚಾರದಲ್ಲಿ ಸರಿಯಾದ ಸೂಚನೆಗಳನ್ನು ಕೊಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಅಲ್ಲಿ ಪಾಸು ಕೊಡುವವರು ಯಾರೂ ಇಲ್ಲ.

ಶ್ರೀ ಕೆ. ಎಸ್. ಹನುಮೇ ಗೌಡ.—ಹಿಂದೆ ಪ್ರತಿ ಶಾಸಕರಿಗೂ ಕಾರ್ಯಕ್ರಮದ ಪಟ್ಟಿಯ ಜೊತೆಯಲ್ಲಿ ಎರಡು ಪಾಸುಗಳನ್ನು ಕಳುಹಿಸುತ್ತಿದ್ದರು, ಈಗ ಅದನ್ನು ತಪ್ಪಿಸಿದ್ದಾರೆ. ಹಿಂದಿನಂತೆ ಪಾಸುಗಳನ್ನು ಕಳುಹಿಸಿಕೊಟ್ಟರೆ ಸಮಸ್ಯೆ ಪರಿಹಾರವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದು ತೀರ ಸೂಕ್ಷ್ಮವಾದ ವಿಷಯ. ಸಾಕಷ್ಟು ಹೇಳಿದ್ದೇವೆ. ಇನ್ನೂ ಸರಿಪಡಿಸದೆ ಹೋದರೆ ನಾವು ಏನು ಮಾಡಬೇಕು ?

Mr. DEPUTY SPEAKER. –Instead of raising this matter here even if you had sent me a small chit I would have speedily attented to it.

## Difficulty in getting Ration Cards

ಶ್ರೀ ಕೆ.ಎಂ. ನಾಗಣ್ಣ (ಚಿಕ್ಕಮಗಳೂರು).–ಮಾನ್ಯ ಅಧ್ಯಕ್ಷರೇ, ಏಪ್ರಿಲ್ ನಾಲ್ಕನೇ ತಾರೀಖು ಉಗಾದಿ ಹಬ್ಬ, ವರ್ಷಕ್ಕೆ ಒಂದು ಸಲ ಬರುವ ದೊಡ್ಡ ಹಬ್ಬ. ರೇಷನ್ ಸಾಮಾನು ಸಿಕ್ಕುತ್ತಿಲ್ಲ' ರೇಷನ್ ಕಾರ್ಡು ಸಿಕ್ಕುತ್ತಿಲ್ಲ. ಫೆಬ್ರವರಿ ತಿಂಗಳಲ್ಲಿ ಕೊಟ್ಟಿರುವ ಆರ್ಜಿಗಳಿಗೆ ಇನ್ನೂ ಕಾರ್ಡುಗಳು ಸಿಕ್ಕಿಲ್ಲ ಹೀಗಾದರೆ ಏನು ಮಾಡಬೇಕು ? ಬೆಂಗಳೂರು ದಕ್ಷಿಣರೇಂಜ್ ಆಫೀಸಿನಲ್ಲಿ ದೊಡ್ಡ ಕ್ಯೂ ಇದ್ದ ಫೋಟೋ ಪತ್ರಿಕೆಗಳಲ್ಲಿ ಬಂದಿದ್ದು ದನ್ನು ತಾವೂ ನೋಡಿರಬಹುದು. ಅಕ್ಕಿ ಇಲ್ಲ, ಗೋಧಿ ಇಲ್ಲ, ರವೆ ಇಲ್ಲ, ಸಕ್ಕರೆ ಇಲ್ಲ, ಬೆಲ್ಲವಾ ಇಲ್ಲ. ಈ ಸರ್ಕಾರದ ಬಂದ ಮೇಲೆ ಎಲ್ಲಕ್ಕೂ ಆಭಾವ ಪ್ರಾರಂಭವಾಗಿದೆ. ಇದರ ಜೊತೆಗೆ ಸರ್ಕಾರ ನಡೆಸುವವರ ನೈತಿಕ ಮಟ್ಟದ ಅಭಾವವೂ ಸೇರಿ ಹೋಗಿದೆ. ಬಸುವಮತಿ ಅಕ್ಕಿ ತಿನ್ನುವಂಥ ಮಂತ್ರಿಗಳಿಗೆ ದಪ್ಪಕ ತಿನ್ನುವ ಬಡ ಜನರ ತೊಂದರೆ ಹೇಗೆ ಗೊತ್ತಾಗಬೇಕು ? ಬಡಜನರಿಗೆ ತುಂಬ ತೊಂದರೆಯಾಗಿದೆ. ಇದನ್ನು ಸರಿಪಡಿಸಬೇಕು.